# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:07/11/2020ರಂದು ನಡೆದ ವಾರ್ಡ್- 78 ಪುಲಿಕೇಶಿನಗರ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸಂಖ್ಯೆ ವಾರ್ಡ್-78 ಪಿ ಆರ್/156/20-21, ದಿನಾಂಕ:07-11-2020

ದಿನಾಂಕ:07/11/2020 ರಂದು ಬೆಳಿಗ್ಗೆ 11:00 ಗಂಟೆಗೆ ವಾರ್ಡ್ ಸಮಿತಿ ಕಾರ್ಯ ಕಲಾಪಗಳ ಬಗ್ಗೆ ಚರ್ಚಿಸಲು ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಯಿತು.


### ಹಾಜರಿದ್ದ ಅಧಿಕಾರಿ/ ನೌಕರರುಗಳ ವಿವರ

| ಕ್ರ.ಸ | ಹೆಸರು | ಪದನಾಮ | ಮೊಬೈಲ್ ನಂ. |
|---|---|---|---|
| 1 | ಶ್ರೀ.ಸುಹೇಲ್ ಅಹಮ್ಮದ್ | ನೋಡಲ್ ಅಧಿಕಾರಿ | 9480684338 |
| 2 | ಶ್ರೀ. ಮೃತ್ಯುಂಜಯ | ಕಾರ್ಯದರ್ಶಿ ಸಹಾಯಕ ಅಭಿಯಂತರರು ವಾರ್ಡ್ ನಂ-78 | 6361559419 |
| 3 | ಶ್ರೀ.ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು | 7795503740 |
| 4 | ಶ್ರೀಮತಿ. ಗಾಯತ್ರಿ | ಕಿರಿಯ ಆರೋಗ್ಯ ಪರಿವೀಕ್ಷಕರು | 9606138887 |
| 5 | ಶ್ರೀ. ಗುರುಮೂರ್ತಿ | ಸಹಾಯಕ ಅಭಿಯಂತರರು ಬೆಸ್ಕಾಂ | 9449874764 |
| 6 | ಶ್ರೀ. ನರಸಿಂಹ ಕೆ. | ಕಂದಾಯ ವಸೂಲಿಗಾರರು | 9844484464 |
| 7 | ಶ್ರೀಮತಿ. ನಳಿನಿ ಐಯ್ಯರ್ | ಅಧ್ಯಕ್ಷರು, ಫ್ರೇಜರ್ ಟೌನ್ RWA | 8310801615 |
| 8 | ಶ್ರೀ. ಮೊಹಮ್ಮದ್ ಅಫ್ಸಾರ್ | ಉಪಾಧ್ಯಕ್ಷರು, ಫ್ರೇಜರ್ ಟೌನ್ RWA | 9845043393 |
| 9 | ಶ್ರೀ. ಸುಜಿತ್ | ಕಾರ್ಯದರ್ಶಿಗಳು, ಫ್ರೇಜರ್ ಟೌನ್ RWA | 9845064240 |
| 10 | ಶ್ರೀಮತಿ. ಹಬೀಬಾ ಸುಭಾನ್ | ಆಯೋಜಕ ಕಾರ್ಯದರ್ಶಿ, ಫ್ರೇಜರ್ ಟೌನ್ RWA | 9108872059 |
| 11 | ಶ್ರೀಮತಿ. ಜ್ಯೋತಿ | ಸಮಿತಿ ಸದಸ್ಯರು | 8123074530 |
| 12 | ಡಾ. ಜೇಬಾ | ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯೆಯರು | |
| 13 | ಶ್ರೀ. ರೂಮನ್ ಪಾಷಾ | ಪಿ.ಎಸ್.ಐ, ಫ್ರೇಜರ್ ಟೌನ್ ಪೋಲೀಸ್ ಠಾಣೆ | |

ವಾರ್ಡ್ ಸಮಿತಿಯ ಸಭೆಯನ್ನು ಪ್ರಾರಂಭಗೊಳ್ಳುತ್ತಿದಂತೆ ನೋಡಲ್ ಅಧಿಕಾರಿಗಳಾದ ಶ್ರೀ.ಸುಹೇಲ್ ಅಹಮ್ಮದ್ ರವರು ಕಮಿಟಿ ಸಭೆಯ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

AE W-78

Scanned with CamScanner



ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ್ದ ವಿಷಯಗಳ ಬಗ್ಗೆ ಹಾಗೂ ಕೋವಿಡ್-19 ರ ಸಂಬಂಧಪಟ್ಟ ಈ ಕೆಳಕಂಡ ಸಭೆಯ ಕಾರ್ಯಸೂಚಿಯಂತೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ.

1. ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾಗಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಗೆ ಸಂಬಂಧಿಸಿದ ದೂರುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮಕೈಗೊಳ್ಳಲು ತಿಳಿಸಲಾಯಿತು.
2. ವಾರ್ಡ್ ವ್ಯಾಪ್ತಿಯಲ್ಲಿನ ಮಾರ್ಷಲ್‌ಗಳು ಎಲ್ಲೆಂದರಲ್ಲಿ ಕಸ ಎಸೆಯುತ್ತಿರುವ ಸಾರ್ವಜನಿಕರ ಮೇಲೆ ನಿಗಾವಹಿಸಿ ದಂಢ ವಿಧಿಸಲು ತಿಳಿಸಲಾಯಿತು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಒಬ್ಬರೇ ಮಾರ್ಷಲ್ ಕಾರ್ಯನಿರ್ವಹಿಸುತ್ತಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಚರ್ಚಿಸಲಾಯಿತು.
3. ಮಾಸ್ಕ್ ರಸ್ತೆಯಲ್ಲಿರುವ SWD ತಡೆಗೋಡೆ ಮೇಲೆ ಮೇಲ್ಹಾವಣೆ ಹಾಕಲು ಸಾರ್ವಜನಿಕರು ಮನವಿ ಮಾಡಿರುತ್ತಾರೆ. ಮಾಸ್ಕ್ ರಸ್ತೆಯಲ್ಲಿರುವ SWD ಯ ಸ್ಲ್ಯಾಬ್ ದುರಸ್ಥಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.
4. ಫ್ರೇಜರ್ ಟೌನ್ RWA ರವರು ಕಾಮಗಾರಿ ಇಲಾಖೆಯಿಂದ ಇಲ್ಲಿಯವರೆವಿಗೂ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಯಾವುದೇ ಸರಿಯಾದ ಕ್ರಮ ಕೈಗೊಂಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿರುತ್ತಾರೆ ಮತ್ತು ಸುಮಾರು ಛಾಯಚಿತ್ರಗಳನ್ನು ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಮತ್ತು ಸಹಾಯಕ ಅಭಿಯಂತರರಿಗೆ ಕಳುಹಿಸಿದರೂ ಸಹ ಏನೂ ಕ್ರಮ ಕೈಗೊಂಡಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಗುಂಡಿಗಳನ್ನು ಮುಚ್ಚಲು ಯಾವಾಗ ಕ್ರಮಕೈಗೊಳ್ಳುತ್ತೀರೆಂದು ಸದಸ್ಯರಿಗೆ ತಿಳಿಸಲು ನಿರ್ಣಯಿಸಲಾಯಿತು.
5. ಸಿಂದಿ ಕಾಲೋನಿ 2ನೇ ಕ್ರಾಸ್, 1ನೇ ಮುಖ್ಯ ರಸ್ತೆ, ವ್ಯಾಪ್ತಿಯಲ್ಲಿ ಸ್ಟ್ರೀಟ್ ಲೈಟ್ಸ್‌ಗಳ ತೊಂದರೆ ಇರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿದ್ದು, ಸಂಬಂಧಪಟ್ಟ ಎಲೆಕ್ಟ್ರೀಕಲ್ ಅಭಿಯಂತರರಿಗೆ ಕೂಡಲೇ ಸರಿಪಡಿಸಲು ತಿಳಿಸಲಾಯಿತು.
6. ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ.ಟಿ.ವಿ ಕ್ಯಾಮರಗಳನ್ನು ಅಳವಡಿಸಲು ತಿಳಿಸಲಾಯಿತು.
7. ವಾರ್ಡ್ ವ್ಯಾಪ್ತಿಯ ಪೌರ ಕಾರ್ಮಿಕರಿಗೆ ಮಾಸ್ಕ್ ರಸ್ತೆ ಮತ್ತು ಮೋರ್ ರಸ್ತೆಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ತಿಳಿಸಲಾಗಿರುತ್ತದೆ.
8. ಫ್ರೇಜರ್ ಟೌನ್ RWA ರವರು ಸಹಾಯಕ ಅಭಿಯಂತರರು, ಪಾದಚಾರಿ ರಸ್ತೆಯ ಮೇಲೆ ಡೆಬ್ರೀಸ್‌ನನ್ನು ತೆರವುಗೊಳಿಸದೇ ಇರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತಾರೆ. ಅದಕ್ಕೆ ಸ.ಕಾ.ನಿ.ಅ ರವರು ಯಾವುದೂ ಗಾಡಿ ಮತ್ತು ಟ್ರ್ಯಾಕ್ಟರ್ ಇಲ್ಲದ ಕಾರಣ ಕೆಲಸವನ್ನು ನಿರ್ವಹಿಸಲು ಸಾಧ್ಯವಾಗದೇ ಇರುವ ಬಗ್ಗೆ ತಿಳಿಸಿರುತ್ತಾರೆ. ಈ ಸಂಬಂಧ ಗುತ್ತಿದಾರರನ್ನು ನಿಯೋಜಿಸಿ ವಾರ್ಡ್ ವ್ಯಾಪ್ತಿಯಲ್ಲಿರುವ ಡೆಬ್ರೀಸ್ ಅನ್ನು ಕೂಡಲೇ ತೆರವುಗೊಳಿಸಲು ನಿರ್ಣಯಕೈಗೊಳ್ಳಲಾಯಿತು.
9. ಗೈರುಹಾಜರಾದ, SWM AEE, Sub Division AEE, AE Electrical, Traffic Inspector, AE BWSSB, ಇಲಾಖೆಯ ಅಧಿಕಾರಿಗಳು ಮುಂದಿನ ವಾರ್ಡ್ ಕಮಿಟಿ ಮಿಟಿಂಗ್‌ಗೆ ಹಾಜರಾಗಲು ತಿಳಿಸಲಾಯಿತು.


AE W-78

Scanned with CamScanner

10. ಕೋವಿಡ್ ಟೆಸ್ಟಿಂಗ್ ಮತ್ತು ಪ್ರಸ್ತುತವಾಗಿ ಆಕ್ಟೀವ್ ಆಗಿರುವ ಕೇಸ್‌ಗಳ ಪಟ್ಟಿಯನ್ನು ಮಾಡಲು ತಿಳಿಸಲಾಯಿತು. ಈ ಸಭೆಗೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಜರಾಗಿದ್ದು ವಾರ್ಡ್‌ನಲ್ಲಿನ ವಸತಿ ಸಮುಚ್ಚಯಗಳಲ್ಲಿ ವಾಸವಿರುವ ಸಾರ್ವಜನಿಕರು ಕೋವಿಡ್ ಟೆಸ್ಟ್ ಮಾಡಿಸಲು ಸಹಕಾರವನ್ನು ನೀಡುತ್ತಿಲ್ಲವೆಂದು ತಿಳಿದರು. ಆದ್ದರಿಂದ ನೋಡಲ್ ಅಧಿಕಾರಿಯವರು, ಆರ್.ಡಬ್ಲ್ಯೂ.ಎ ಅಧ್ಯಕ್ಷರವರಿಗೆ ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಸಹಕಾರ ನೀಡಲು ಮಾಹಿತಿ ನೀಡಲು ತಿಳಿಸಿದರು.

11. ಫ್ರೇಜರ್ ಟೌನ್ ಆರ್.ಡಬ್ಲ್ಯೂ.ಎ ರವರು ಪ್ರತಿ ಸದಸ್ಯರುಗಳಿಗೆ ಗುರುತಿನ ಚೀಟಿಗಳನ್ನು (ID card) ವಿತರಿಸಲು ಸಭೆಯಲ್ಲಿ ಕೋರಿದರು.

12. ಫ್ರೇಜರ್ ಟೌನ್ ಪೋಲೀಸ್ ಠಾಣೆ ರವರಿಗೆ ವಾರ್ಡ್ ವ್ಯಾಪ್ತಿಯ ಪ್ರದೇಶದಲ್ಲಿ ಪೆಟ್ರೋಲಿಂಗ್, Drugs ಬಗ್ಗೆ ಹೆಚ್ಚುವರಿಯಾಗಿ ಕ್ರಮವಹಿಸುವಂತೆ ತಿಳಿಸಿದರು. ಮತ್ತು ಟೀ ಅಂಗಡಿಯಲ್ಲಿ ಸುಮಾರು ಹುಡುಗರು ರಾತ್ರಿ ವೇಳೆ ಗುಂಪು ಗುಂಪಾಗಿ ಸೇರುತ್ತಿರುವುದರಿಂದ ಅವರುಗಳ ಮೇಲೆ ನಿಗಾ ವಹಿಸಲು ಸಭೆಯಲ್ಲಿ ತಿಳಿಸಲಾಯಿತು.



ನಂತರ ಮುಂದಿನ ಸಭೆಯೊಳಗೆ ಮೇಲ್ಕಂಡ ಕೋವಿಡ್-19 ರ ಬಗ್ಗೆ ವಾರ್ಡ್ ವ್ಯಾಪ್ತಿಯಲ್ಲಿನ ಮಾಹಿತಿಯನ್ನು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಮಾಹಿತಿಗಳನ್ನು ನೀಡಲು ಮತ್ತು ಮುಂದಿನ ಸಭೆಯಲ್ಲಿ ಘನತ್ಯಾಜ್ಯ ಮತ್ತು ಟ್ರಾಫಿಕ್ ಪೋಲಿಸ್ ರವರು ಸಹ ಹಾಜರಾಗಲು ತಿಳಿಸುತ್ತಾ ಮತ್ತು ಬರುವ ದೀಪಾವಳಿ ಹಬ್ಬಕ್ಕೆ ಎಲ್ಲಾ ಪೌರಕಾರ್ಮಿಕರಿಗೆ, ಮೇಸ್ತ್ರಿಗಳಿಗೆ 250 ಗ್ರಾಂ. ಸ್ವೀಟ್ ಬಾಕ್ಸ್‌ಗಳನ್ನು ನೀಡಿ ಸನ್ಮಾನಿಸಲು ನಿರ್ಣಯಿಸಿ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಸಂ.ಅ ವಾರ್ಡ್-78

ನೋಡಲ್ ಅಧಿಕಾರಿ ಹಾಗೂ
ಕಂದಾಯ ಅಧಿಕಾರಿ (ಶಿವಾಜಿನಗರ) ವಿಭಾಗ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ /ಎಸ್.ಡಬ್ಲ್ಯೂಎಂ/ ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ.
6. AE Bescom, AE BWSSB, ರವರ ಅವಗಾಹನೆಗಾಗಿ ಕಳುಹಿಸಿದೆ.
7. Crime and Traffic Police Inspectors, Frazer town Police Stations ರವರ ಅವಗಾಹನೆಗಾಗಿ ಕಳುಹಿಸಿದೆ.
8. President, Frazer town RWA and Members ರವರ ಅವಗಾಹನೆಗಾಗಿ ಕಳುಹಿಸಿದೆ.

Scanned with CamScanner